ಸಾಕ್ಷಿಯನ್ನು ದಿಃ11.01.2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಪ್ರತಿವಾದಿಗಳ ಪರ ಶ್ರೀ ಬಿ ಎಲ್ ಎಸ್ ವಕೀಲರಿಂದಃ**

ನಾನು ಚಿನ್ನದ ವ್ಯಾಪಾರ ಮಾಡುತ್ತೇನೆ. ನಾನು ರಾಜಲಕ್ಷ್ಮಿ ಜ್ಯುಯಲರ್ಸ್ ಎಂದು ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತೇನೆ. ವಾದಿಯೂ ಕೂಡ ಚಿನ್ನದ ವ್ಯಾಪಾರ ಮಾಡುತ್ತಿದ್ದು ಅವರ ಅಂಗಡಿಯ ಹೆಸರು ಮೈಲಾರ ಲಿಂಗೇಶ್ವರ ಜ್ಯೂಯಲರ್ಸ್ ಎಂದು ಇರುತ್ತದೆ. ವಾದಿ ನನಗೆ ಕಳೆದ 20 ವರ್ಷಗಳಿಂದ ಪರಿಚಯವಿದ್ದಾರೆ. ಪ್ರತಿವಾದಿಯರು 6-7 ವರ್ಷಗಳಿಂದ ಪರಿಚಯವಿದ್ದಾರೆ. ಪ್ರತಿವಾದಿ ಚಿನ್ನಸ್ವಾಮಿಗೆ ಇಬ್ಬರು ಗಂಡು ಮಕ್ಕಳು ಇದ್ದಾರೆ.

ವಾದಿ ಸತ್ಯನಾರಾಯಣ ಚಾರ್ ಮತ್ತು ಪ್ರತಿವಾದಿ ಚಿನ್ನಸ್ವಾಮಿ ಮಧ್ಯೆ ಆದ ವ್ಯವಾಹಾರದ ಬಗ್ಗೆ ಗೊತ್ತಿರುತ್ತದೆ. ವಾದಿಯು ಈ ದಾವೆ ಪ್ರತಿವಾದಿಯ ವಿರುದ್ಧ ಕರಾರಿನಂತೆ ದಾಖಲೆ ಬರೆದುಕೊಟ್ಟಿಲ್ಲ ಎಂದು ಹೂಡಿದ್ದಾರೆ. ಸದರಿ ವ್ಯವಹಾರವು ವಾದಿ ಮತ್ತು ಪ್ರತಿವಾದಿ ಮಧ್ಯೆ 18.02.2014 ರಂದು ಆಗಿರುತ್ತದೆ. ಸದರಿ ವ್ಯವಹಾರವು ನನ್ನ ಮುಂದೆ ಆಗಿರುತ್ತದೆ. ಒಟ್ಟು 8 ಎಕರೆ ಜಮೀನು ಕೊಡಲು ಮಾತಾಗಿದ್ದು ತಲಾ ಒಂದು ಎಕರೆ ಬೆಲೆ ನನಗೆ ಗೊತ್ತಿಲ್ಲ. ಸಾಕ್ಷಿಯು ಪುನಃ ಒಟ್ಟು 8 ಎಕರೆ ಜಮೀನು ರೂ.19,30,000/- ಕ್ಕೆ ಕೊಡಲು ಮಾತಾಗಿತ್ತು. ಆ ವ್ಯವಹಾರದ ಕರಾರು ಆದಾಗ ನಾನು ಹಾಜರಿದ್ದೆ. ಸದರಿ ವ್ಯವಹಾರ ಆದಾಗ ವಾದಿ , ಪ್ರತಿವಾದಿ, ಪ್ರತಿವಾದಿ ಚಿನ್ನಸ್ವಾಮಿ ಹೆಂಡತಿ ಮಕ್ಕಳು ಎಲ್ಲರೂ ಇದ್ದರು. ನಾನು ಸದರಿ ಕರಾರಿಗೆ ಸಹಿ ಮಾಡಿರುವುದಿಲ್ಲ. ಕರಾರು ಪತ್ರ

ಬೆಳಿಗ್ಗೆ 11.30 ರಿಂದ 1.30 ರ ವರೆಗೆ ಆಗಿರುತ್ತದೆ. ಮೇಲೆ ಹೇಳಿದ ವ್ಯಕ್ತಿಗಳಲ್ಲದೇ ಲಕ್ಷ್ಮೀನಾರಾಯಣ್, ಮಂಜುನಾಥ್ ಸಹ ಹಾಜರಿದ್ದರು. ಮಾತುಕತೆಯು ಅಂದಾಜು ಒಂದು ತಾಸು ಅಂದರೆ ಬೆಳಿಗ್ಗೆ 11.30 ರಿಂದ 12.30 ರ ವರೆಗೆ ಆಗಿರುತ್ತದೆ.

ಕರಾರು ಪತ್ರದಲ್ಲಿ ಬರೆದ ಅಂಶಗಳೆಲ್ಲವೂ ನನಗೆ ಗೊತ್ತಿದೆ. ಕರಾರು ಪತ್ರದಲ್ಲಿ ಜಮೀನಿನ ಉತ್ತರ ದಿಕ್ಕಿಗೆ ಏನು ಇದೆ ಎಂದು ಗೊತ್ತಿಲ್ಲ. ಪ್ರತಿವಾದಿಯ ಪೈಕಿ ಲಕ್ಷಿನಾರಾಯಣ್, ಮಂಜುನಾಥ ಆಲೂರು ಸಹಿ ಮಾಡಿದ್ದಾರೆ. ಸಾಕ್ಷಿ ಪುನಃ ಸಾಕ್ಷಿದಾರರಾಗಿ ಲಕ್ಷ್ಮೀನಾರಯಣ್ ಮತ್ತು ಮಂಜುನಾಥ್ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ಪೈಕಿ, ಚಿನ್ನ ಸ್ವಾಮಿ, ಲಲಿತಮ್ಮ ಮತ್ತು ಮಂಜು ಸಹಿ ಮಾಡಿದ್ದಾರೆ. ಇನ್ನೊಬ್ಬ ಮದು ಅಲ್ಪವಹಿ ಆಗಿದ್ದು ಆತನ ಪರವಾಗಿ ಅವನ ತಂದೆ ಸಹಿ ಮಾಡಿದ್ದಾರೆ. ಅವರೆಲ್ಲರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ.

ಸಾಕ್ಷಿಗೆ ನಿಪಿ-20(ಡಿ) ಸಹಿ ಯಾರದು ಎಂದು ಕೇಳಿದಾಗ ಮದು ದು ಎಂದು ಗುರುತಿಸಿದ್ದಾರೆ. ನಿಪಿ-20 ಆಗುವಾಗ ನನ್ನ ಮುಂದೆ ಸದರಿ ಮದು ಆ ದಾಖಲೆಗೆ ಸಹಿ ಮಾಡಿರಲಿಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಕರಾರು ಆದ ದಿನ ಎಷ್ಟು ದಾಖಲೆಗಳನ್ನು ತಯಾರಿಸಲಾಗಿತ್ತು ಎಂದು ಗೊತ್ತಿಲ್ಲ. ಸದರಿ ಕರಾರು ಪತ್ರ ಬರೆಯಲು ಮಾಹಿತಿ ಯಾರು ಕೊಟ್ಟರು ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಮಾಹಿತಿ ಕೊಡದೇ ಇದ್ದುದ್ದರಿಂದ ಆ ದಾಖಲೆಯಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ಗೊತ್ತಿಲ್ಲ ಎನ್ನುವುದು ನಿಜ. ಸಾಕ್ಷಿ ಪುನಃ ವ್ಯವಹಾರ ತನ್ನ ಸಮಕ್ಷಮ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳಿದಂತೆ ವಾದಿ ಮತ್ತು ಪ್ರತಿವಾದಿಯ ಮದ್ಯೆ ದಾವಾ ಸ್ವತ್ತಿನ ಬಗ್ಗೆ ವ್ಯವಹಾರದ ಯಾವುದೇ ಮಾತುಕತೆ ಆಗಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಯಾವತ್ತೂ ದಾವಾ ಸ್ವತ್ತನ್ನು ವಾದಿಗೆ ಮಾರಾಟ ಮಾಡುತ್ತೇವೆ ಎಂದು ಹೇಳಿಲ್ಲ ಅದೇ ರೀತಿ ವಾದಿಯೂ ಕೂಡ ಖರೀದಿಸುತ್ತೇನೆ ಎಂದು ಹೇಳಿಲ್ಲ ಎಂದರೆ ಸುಳ್ಳು. ವಾದಿಯು ಪ್ರತಿವಾದಿಗೆ ಬಡ್ಡಿ ಸಾಲಕ್ಕೋಸ್ಕರ

ಹಣ ಕೊಟ್ಟಿದ್ದಾನೆ ಎಂದರೆ ಸರಿಯಲ್ಲ. ವಾದಿಯು ನನಗೆ ತುಂಬಾ ಬೇಕಾದ ವ್ಯಕ್ತಿಯಾಗಿದ್ದರಿಂದ ಸಹಾಯ ಮಾಡಲು ಪ್ರತಿವಾದಿಯರ ವಿರುದ್ದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರ ಮದ್ಯೆ ಆಗಿರುವ ಹಣದ ವ್ಯವಹಾರದ ಬಗ್ಗೆ ನನಗೆ ಏನೂ ಗೊತ್ತಿಲ್ಲ ಎಂದರೆ ಸರಿಯಲ್ಲ.

ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ ಹಿರಿಯೂರು.